# ಹೌದೆ?!

ಝೆನ್‌ಗುರು ಹಾಕ್‌ಇನ್ ಅವನ ತಪಸ್ಸು ಮತ್ತು ವ್ಯಕ್ತಿತ್ವದಿಂದ ಊರಿನ ಎಲ್ಲರ ಗೌರವಕ್ಕೆ ಪಾತ್ರನಾಗಿದ್ದ. ಅವನ ಮಠದ ಸನಿಹದಲ್ಲಿಯೇ ಅಂಗಡಿಯೊಂದಿತ್ತು. ಆ ಅಂಗಡಿಯ ಮಾಲೀಕರಿಗೆ ಸುಂದರಿಯಾದ ಮಗಳಿದ್ದಳು. ಒಂದು ದಿನ ಆ ದಂಪತಿಗೆ ಆಘಾತಕಾರಿ ಸುದ್ದಿಯೊಂದು ಕಾದಿತ್ತು; ಮಗಳು ಗರ್ಭಿಣಿಯಾಗಿದ್ದಳು. ಇದಕ್ಕೆ ಕಾರಣ ಯಾರು ಎಂದು ಅವರು ಮಗಳನ್ನು ಎಷ್ಟು ಪ್ರಶ್ನಿಸಿದರೂ ಅವಳು ಬಾಯಿ ಬಿಡಲೇ ಇಲ್ಲ. ಕೊನೆಗೆ ಅವಳು ವಿಧಿಯಿಲ್ಲದೆ ಹೇಳಿದಳು – 'ಹಾಕ್‌ಇನ್ ಇದಕ್ಕೆ ಕಾರಣ.'

ಝೆನ್‌ಸಂನ್ಯಾಸಿಯ ಕೃತ್ಯದಿಂದ ಆ ದಂಪತಿಗೆ ತುಂಬ ಸಿಟ್ಟು ಬಂದಿತು. ಮಠಕ್ಕೆ ಧಾವಿಸಿದರು; ಕೂಗಾಡಿದರು; ಬೈದರು. ಈ ಎಲ್ಲದಕ್ಕೂ ಆ ಗುರು ನೀಡಿದ ಪ್ರತಿಕ್ರಿಯೆ 'ಹೌದೆ?!' ಎಂದಷ್ಟೆ.

ಮಗು ಹುಟ್ಟಿತು. ಕೂಸನ್ನು ಹಾಕ್‌ಇನ್‌ನಲ್ಲಿಗೆ ತಂದರು. ಆ ವೇಳೆಗಾಗಲೇ ಅವನು ಜನರ ಗೌರವವನ್ನು ಕಳೆದುಕೊಂಡಿದ್ದ. ಜನರ ದೃಷ್ಟಿಯಲ್ಲಿ ಅವನೊಬ್ಬ ಆಷಾಢಭೂತಿಯಾಗಿದ್ದನಷ್ಟೆ. ಮಗುವನ್ನು ಅವನಿಗೇ ಒಪ್ಪಿಸಲಾಯಿತು. ಅವನು ಮಗುವಿನ ಆರೈಕೆಯಲ್ಲಿ ತನ್ನನ್ನು ತೊಡಗಿಸಿಕೊಂಡ. ಮಗುವಿನ ಬೆಳವಣಿಗೆಗೆ ಏನೆಲ್ಲ ಆವಶ್ಯಕವೋ ಅವೆಲ್ಲವನ್ನೂ ಒದಗಿಸುತ್ತ ಬಂದ.

ಹೀಗೆ ಒಂದು ವರ್ಷ ಕಳೆಯಿತು. ಆ ತಾಯಿಗೆ ಸತ್ಯವನ್ನು ಇನ್ನು ಹೆಚ್ಚು ದಿನ ಮುಚ್ಚಿಡುವುದು ಕಷ್ಟವಾಗತೊಡಗಿತು. ಅವಳ ಹೆತ್ತವರಲ್ಲಿಗೆ ಹೋಗಿ ಹೇಳಿದಳು: 'ಮಗುವಿನ ತಂದೆ ಝೆನ್‌ಗುರು ಅಲ್ಲ.' ಮಗುವಿನ ತಂದೆ ಅದೇ ಊರಿನ ಮೀನಿನ ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತಿದ್ದ.

ಈಗ ಆ ದಂಪತಿ ಹಾಕ್‌ಇನ್‌ನಲ್ಲಿಗೆ ಓಡಿದರು. ತಪ್ಪಾಯಿತು, ಕ್ಷಮಿಸುವಂತೆ ಬೇಡಿದರು. ನಿಜವಾದ ತಪ್ಪಿತಸ್ಥ ಸಿಕ್ಕಿದ್ದಾನೆ ಎಂದರು. ಮಗುವನ್ನು ಹಿಂದಿರುಗಿಸುವಂತೆ ಕೇಳಿಕೊಂಡರು. ಮಗುವನ್ನು ಕೊಡುತ್ತ ಹಾಕ್‌ಇನ್ ಉದ್ಗರಿಸಿದ್ದು: 'ಹೌದೆ?!'

**ಹಾಕ್‌ಇನ್ ತಾಳ್ಮೆಗೆ ಪ್ರತಿರೂಪವಾಗಿದ್ದ. ನಮ್ಮ ಮೇಲೆ ಯಾರಾದರೂ ಅಪವಾದವನ್ನು ಆರೋಪ ಮಾಡಿದ ಕೂಡಲೇ ನಾವು ಸಮತೋಲನವನ್ನು ಕಳೆದುಕೊಳ್ಳುತ್ತೇವೆ. ಕೂಗಾಡುತ್ತೇವೆ; ನಾವು ತಪ್ಪು ಮಾಡಿಲ್ಲವೆಂದು ಸಾಬೀತು ಮಾಡಲು ಮುಂದಾಗುತ್ತೇವೆ. ಅಥವಾ ಮಾನಸಿಕವಾಗಿ ಕುಗ್ಗಿಹೋಗಿ ಜೀವನವನ್ನೇ ಪಣವಾಗಿಡುತ್ತೇವೆ. ಎಷ್ಟೋ ಸಮಸ್ಯೆಗಳಿಗೆ ಕಾಲವೇ ಪರಿಹಾರವನ್ನು ನೀಡುತ್ತದೆ. ಬಂದದ್ದನ್ನು ಧೈರ್ಯವಾಗಿ ಎದುರಿಸಬೇಕಷ್ಟೆ. ಮೊದಲು ನಮ್ಮ ವ್ಯಕ್ತಿತ್ವದ ಬಗ್ಗೆ ನಮಗೆ ನಂಬಿಕೆ ಇರಬೇಕು. ಹೊರಗಿನ ಜಗತ್ತಿನಿಂದ ಆರೋಪಗಳು, ತೊಂದರೆಗಳು ಎದುರಾಗುವುದು ಸಹಜ. ಆದರೆ ನಾವು ಅಂಥ ಸಂದರ್ಭಗಳಲ್ಲಿ ಸ್ಥೈರ್ಯವನ್ನು ಕಳೆದುಕೊಳ್ಳಬಾರದು. ಟೀಕೆ ಮಾಡುವವರಿಗೆ ನಮ್ಮ ಮಾತಿನಿಂದಲೋ ತರ್ಕದಿಂದಲೋ ಸಮಾಧಾನಗೊಳಿಸುವುದು ಸುಲಭವಲ್ಲ. ಎಷ್ಟೋ ಟೀಕೆಗಳು ಅವಷ್ಟಕ್ಕೆ ಅವೇ ಬಿದ್ದುಹೋಗುತ್ತವೆ; ನಾವು ತಾಳ್ಮೆಯನ್ನು ಕಳೆದುಕೊಳ್ಳಬಾರದು; ಉದ್ವೇಗಕ್ಕೆ ಒಳಗಾಗಬಾರದು; ವಿಪರೀತವಾಗಿ ವರ್ತಿಸಬಾರದು. ಹಾಕ್‌ಇನ್‌ಗೆ ಎದುರಾದ ಸಂಕಷ್ಟವನ್ನು ಅವನು ಸ್ವೀಕರಿಸಿದ; ಅದರ ಪಾಡಿಗೆ ಅದೇ ಕರಗಿಹೋಗುವವವರೆಗೂ ಕಾದ. ಜೀವನದಲ್ಲಿ ಎದುರಾಗುವ ಕಷ್ಟದ ಸಂದರ್ಭಗಳಲ್ಲಿಯೇ ಪರಿಹಾರವೂ ಇರುತ್ತದೆ; ನಾವು ನಮ್ಮ ಜೀವನವನ್ನು ಸ್ವೀಕರಿಸಬೇಕು; ಅದರಲ್ಲಿ ಹೆಜ್ಜೆ ಹಾಕುತ್ತ ಸಾಗಬೇಕಷ್ಟೆ.**